(*b*) If so, the reasons for the same and the steps taken to avoid hardsteps caused to the passengers awaiting at the Ranebennur bus stand at night due to non stoppage of the above bus service ?

SRI K. H. RANGANATH (Minister for Transport and Housing)

(*a*) No.

(*b*) Does not arise.

ಶ್ರೀ ಬಿ. ಜಿ. ಖಣಕಾರ್ :—ತಾವು ಆದೇಶ ಕೊಟ್ಟ ಪ್ರಕಾರ, ರಾಣೆಬೆನ್ನೂರಿನಲ್ಲಿ ಎಲ್ಲಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ೧೫ನೇ ಏಪ್ರಿಲ್ ೧೯೭೪ ರಿಂದ ನಿಂತು ಹೋಗಲಿಕ್ಕೆ ಪ್ರಾರಂಭ ಮಾಡಿವೆ. ಇದಕ್ಕೆ ತಾವು ಅಭಿನಂದನಾರ್ಹರು.

ಶ್ರೀ ಕೆ. ಎಚ್ ರಂಗನಾಥ್ :—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ರಾಣೆಬೆನ್ನೂರಿನಲ್ಲಿ ರಾಜ್ಯದ ಸಾರಿಗೆ ಬಸ್ಸುಗಳು ನಿಂತು ಹೋಗಲಿಕ್ಕೆ ೧೫ನೇ ಏಪ್ರಿಲ್ ೧೯೭೪ ರಿಂದ ಪ್ರಾರಂಭ ಮಾಡಿವೆ ಕಲವು ಎಕ್ಸ್‌ಪ್ರಸ್ ಬಸ್ಸುಗಳು ಬಸ್‌ಸ್ಟ್ಯಾಂಡಿನ ಒಳಗೆ ಹೋಗದೆ ಹೈವೇ ನಿಲ್ದಾಣ ಹಾಗೆಯೇ ಹೋಗುತ್ತಿದ್ದು, ೧೫ನೆ ತಾರೀಖಿನಿಂದ ಈ ಎಲ್ಲಾ ಬಸ್ಸುಗಳು ಬಸ್‌ಸ್ಟ್ಯಾಂಡನ ಒಳಗೆ ನಿಂತುಹೋಗಲಿಕ್ಕೆ ಏರ್ಪಾಡು ಮಾಡಲಾಗಿದೆ.

PERMITS FOR CONTRACT CARRIAGES

455 SRI C. BYRE GOWDA (Vemgal).-

Will the Minister for Transport and Housing be pleased to state.-

(*a*) the number of contract carriage permits issued from the last 3 years up-to-date.

(*b*) Out of them, the number of temporary and permanent permits;

(*c*) Out of them, the number of temporary and permanent permits issued after the present ministry assumed office, number of them issued earlier;

(*d*) out of them, the number of permits issued to the private operators;

(*e*) the number of permits issued to K.S.R.T.C.

(*f*) Whether any allegations of corruption have been received against the concerned, authorities in respect of issue of permits;

(*g*) if so, their details;

(*h*) Whether it has come to the notice of the Government that due to playing of private contract busses on the nationalised and other routes the R.T.C. is suffering loss ;

(*i*) If so, whether Government is thinking of nationalising these bus routes or taking any other steps ;

(*j*) Whether there are any allegations that the Police Stations on these routes are receiving Rs. 50 to 100 P. M. as bribe ;

(*k*) If so, the step taken by the Government in this behalf ?

SRI K. H. RANGANATH (Minister for Transport and Housing.—

(*a*) 838 Contract carriage permits haze been issued during the during the last 3 years.

(*b*) Temporary permits 721
Permanent permits 117

(*c*) The number of permits issued after the present Ministry assumed office are as follows ;

Temporary permits 517
Permanent permits 100

Permits issued before the formation of the Ministry are as follows

Temporary permits 207
Permanent permits 17

(*d*) 721 Temporary and 52 permanent permits have been issued.
(*e*) 3 Permanent permits no temporary permits issued.
(*f*) Not come to the notice of the Government.
(*g*) Question does not arise in view of reply to clause (*j*)
(*h*) No.
(*i*) K.S.R.T.C. proposes to nationalise the Contract Carriage.
(*j*) No
(*k*) Question does not in view of reply to clause (*i*)

ಶ್ರೀ ಕೋಣಂದೂರು ಲಿಂಗಪ್ಪ .—ತಮ್ಮ ಉತ್ತರದಲ್ಲಿ ಕಂಟ್ರಾಕ್ಟ್ ಕ್ಯಾರೇಜ್‌ಗಳಿಗೆ ೮೩೮ ಹಂಗಾಮಿ ಪರ್ಮಿಟ್ಸ್ ಕೊಡಲಾಗಿದೆ ಎಂದು ಹೇಳಿದ್ದೀರಿ. ಸ್ವಲ್ಪ ದಿವಸಗಳ ಹಿಂದೆ, ಸಂವಾರು ೮೧೧೫ ಪರ್ಮಿಟ್ಟಗಳನ್ನು ಕೊಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ ಈ ರೀತಿ ಹೇಳಿ ತಾವು ವಿವಂಚನೆಗೆ ಒಳಗಾಗಿದ್ದೀರಿ. ಈ ಎರಡರಲ್ಲಿ ಯಾವುದನ್ನು ನಾವು ಒಪ್ಪಬೇಕು ಎನ್ನುವುದು ಅರ್ಥವಾಗಲಿಲ್ಲ.

† ಶ್ರೀ ಕೆ. ಎಚ್. ರಂಗನಾಥ್.—ಎರಡನ್ನು ಒಪ್ಪಬೇಕು,

ಶ್ರೀ ಕೋಣಂದೂರು ಲಿಂಗಪ್ಪ,—ಹೇಗೆ, ಯಾವ ಆದಾರದ ಮೇಲೆ ಒಪ್ಪಬೇಕು ?

ಶ್ರೀ ಕೆ. ಎಚ್. ರಂಗನಾಥ್.—೨ ಸಾವಿರ ಸ್ಪೆಷಲ್ ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆ. ಇಲ್ಲಿ ತಾವು ಟೆಂಪರರಿ ಮತ್ತು ಪಕ್ಕ ಪರ್ಮಿಡ್‌ಗಳ ಪ್ರಶ್ನೆಯನ್ನು ಕೇಳಿರತಕ್ಕದ್ದು ತಾವು ಕೇಳಿರತಕ್ಕಂಥ ಪ್ರಶ್ನೆಗೆ ತಕ್ಕಂಥ ಉತ್ತರ ಕೊಡಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—(ಅ) ಭಾಗದ ಉತ್ತರಕ್ಕೆ ಇನು ಟೆಂಪರರಿ ಪರ್ಮಿಟ್ಟ್ ಆಗಬಹುದು ಪರ್ಮನೆಂಟ ಪರ್ಮಿಟ್ ಆಗಬಹುದೂ ಅಥವಾ ಇನ್ನು ಇತರೆ ಪರ್ಮಿಟ್ಸ್ ಆಗಬಹುದು. ತಾವು ಹೇಳತಕ್ಕ ರೀತಿಯಲ್ಲಿ ಇದು ೮೦೦೦ ಆಗಬೇಕಾಗುತ ದೆ. ಇದರ ಬಗ್ಗೆ ಸರಿಯಾದ ಉತ್ತರಬೇಕು ?

ಶ್ರೀ ಕೆ. ಎಚ್. ರಂಗನಾಥ್.—ನಾವು ಕೊಟ್ಟಿರತಕ್ಕ ಟೆಂಪರರಿ ಪರ್ಮಿಟ್ಸ್ ಮಂತ್ತು ಪಕ್ಕ ಪರ್ಮಿಟ್ಟ್ ಎರಡನ್ನು ಟೋಟಲ್ ಹಾಕಿದರೆ ೮೦೩೮ ಬರುತ ದೆ.

ಶ್ರೀ ಕಾಗೋಡು ತಿಮ್ಮಪ್ಪ.—(ಅ) ಭಾಗದ ಉತ್ತರದಲ್ಲಿ ಕೊಟ್ಟಿರುವ ಉತ್ತರವನ್ನು ನೋಡಿದರೆ ೮೩೮ ಎಂದು ಇದೆ. ಒಟ್ಟು ಎಷ್ಟೆಷ್ಟು ತರಹದ ಪರ್ಮಿಟ್‌ಗಳನ್ನು ಈ ಮೂರು ವರ್ಷಗಳಲ್ಲಿ ಕೊಟ್ಟಿದ್ದೀರಿ ?

ಶ್ರೀ ಕೆ ಎಚ್. ರಂಗನಾಥ್ ,—ಸೆಕ್ಷನ್ ೫೦ರ ಪ್ರಕಾರ ಕಂಟ್ರಾಕ್ಟ್ ಕ್ಯಾರೇಜಸ್‌ಗೆ ಟೆಂಪರರಿ ಮಂತ್ತು ಪಕ್ಕ ಪರ್ಮಿಟ್ಸ್ ಕೊಡುತ್ತಾರೆ. ಸ್ಪೆಷಲ್ ಪರ್ಮಿಟ್ಸ್ ಬಗೆವುದು ಬೇರೆ ಸೆಕ್ಷನ್ ಪ್ರಕಾರ ನಾನು ಹಿಂದೆ ಕೊಟ್ಟಿರುವ ಉತ್ತರ ಎರಡನ್ನು ಕೂಡಿದೆ. ಆದ್ದರಿಂದ ವಿವೆಂಚನೆಗೆ ಒಳಗಾಗಿದ್ದೇನೆ ಎನ್ನುವುದು ಸರಿ ಯಲ್ಲ. ಮಾನ್ಯ ಸದಸ್ಯರು ಅದನ್ನು ವೆರಿಫೈ ಮಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಪೆಷಲ್ ಪರ್ಮಿಟ್‌ಗಳು ಎಂದರೆ ಯಾವುದಾದರೂ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಟೂರಿಸ್ಟ್ ತರಹ ಕೆಲವರು ಗುಂಪಾಗಿ ಹೋಗಿ ನೋಡಿಕೊಂಡು ಬರುವುದಕ್ಕೆ ಕೊಟ್ಟಿರುವ ಪರ್ಮಿಟ್‌ಗಳೇ ಅಥವಾ ಕಂಟ್ರಾಕ್ಟ್ ಕ್ಯಾರೇಜ್‌ಗಳ ತರಹ ಟೆಂಪೊರರಿ ಪರ್ಮಿಟ್ ಕೊಟ್ಟು ಇವತ್ತಿನ ದಿವಸ ಅವರು ಎಲ್ಲಿಬೇಕಾದರೂ ಯಾರನ್ನು ಬೇಕಾದರೂ ಕರೆದು ಕೊಂಡು ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಾರಲ್ಲ ಆ ತರಹವೇ ?

ಶ್ರೀ ಕೆ. ಹೆಚ್ ರಂಗನಾಥ್.—ಯಾವುದಾದರೂ ಮಾದುವೆ ಮುಂಜಿಗಳಿಗೆ ಟೂರಿಸ್ಟ್ ದೃಷ್ಟಿ ಯಿಂದ ಕರೆದುಕೊಂಡು ಹೋಗುವುದು ಸ್ಪೆಷಲ್ ಪರ್ಮಿಟ್‌ನಲ್ಲಿ ಬರುತ್ತದೆ. ಸೆಕ್ಷನ್ ೫೧ರ ಕೆಳಗೆ ಕೊಡತಕ್ಕದ್ದು ಏನು ಇವೆ ಅದು ಟೆಂಪೊರರಿ ಮತ್ತು ಬೇಕ್ ಪರ್ಮಿಟ್. ಈ ಕಂಟ್ರಾಕ್ಟ್ ಕ್ಯಾರೇಜ್ ಗಳಿಗೆ ಯಾವಾಗ ಬೇಕಾದರೂ ಹೋಗುವುದಕ್ಕೆ ಈ ಪರ್ಮಿಟ್ ಇರುತ್ತದೆ.

ಶ್ರೀ ಕೆ. ಆರ್. ಶ್ರೀನಿವಾಸಲುನಾಯಡ್ಡ —ತಾವು (ರೂ) ಪ್ರಶ್ನೆಗೆ ಉತ್ತರ ಕೊಡುತ್ತಾ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ, ಈ ಕಂಟ್ರಾಕ್ಟ್ ಕ್ಯಾರೆಜಿಸ್ಸಿಗೆ ಪರ್ಮಿಟ್ ಕೊಟ್ಟಿರುವುದರಿಂದ ಈ ಪ್ರಶ್ನೆ ಉದ್ಭವವಾಗಿರುವುದು. ಸರ್ಕಾರದ ಗಮನಕ್ಕೆ ಬಂದಿಲ್ಲ ಎನ್ನುವುದಕ್ಕೆ ಕಾರಣ ಏನು ಹೇಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಕಂಟ್ರಾಕ್ಟ್ ಕ್ಯಾರೆಜ್‌ಗಳು ಓಡುತ್ತಾ ಇರುವುದರಿಂದ ಕೆ. ಎಸ್. ಆರ್. ಟಿ. ಸಿ. ಗೆ ನಷ್ಟ ಆಗುತ್ತದೆಯೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಉತ್ತರದಲ್ಲಿ ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, 'ಜೆ' ಭಾಗಕ್ಕೆ ಉತ್ತರ ಹೇಳಿದ್ದೀರಿ. ೫೦ ರೂಪಾಯಿ ನಿಂದ ೧೦೦ ರೂಪಾಯಿನವರೆಗೆ ಲಂಚ ತೆಗೆದುಕೊಳ್ಳುತ್ತಿರುವುದು ಸುಳ್ಳು ಎಂದು ಹೇಳಿದ್ದೀರಿ. ಶಿವಮೊಗ್ಗ ಬೆಂಗಳೂರು ಮಧ್ಯೆ ಓಡಾಡತಕ್ಕ ೪–೫ ಬಸ್ಸುಗಳನ್ನು ಹಿಡಿದು ಕೇಸ್ ಹಾಕಿದ್ದೀರಿ. ಶಿವಮೊಗ್ಗದಿಂದ ಬೆಂಗಳೂರು ಮಧ್ಯೆ ಸುಮಾರು ೧೦-೧೨ ಪೋಲೀಸ್ ಸ್ಟೇಷನ್‌ಗಳು ಇದ್ದರೂ ತಾವು ಹಿಡಿಯುವುದಕ್ಕೆ ಮಂಂಚೆ ಅವರು ಏತಕ್ಕೆ ಚೆಕ್ ಮಾಡಲಿಲ್ಲ ? ಮತ್ತು ಕೇಸ್ ಏಕೆ ಹಾಕಲಿಲ್ಲ

ಶ್ರೀ ಕೆ. ಹೆಚ್. ರಂಗನಾಥ್.—ಹಿಡಿಯದೇ ಇರುವುದರಿಂದ ಲಂಚ ತೆಗೆದುಕೊಳ್ಳುವ ಮಾಮೂಲು ಮಾಡಿಕೊಂಡಿದ್ದಾರೆ ಎಂದು ಇಫೆರೆನ್ಸ್ ಡ್ರಾ ಮಾಡುವುದು ತಪ್ಪಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಹಿಡಿಯದೆ ಇದ್ದುದರಿಂದ ಲಂಚ ತೆಗೆದುಕೊಳ್ಳುವುದಿಲ್ಲ ಎನ್ನುವ ಮಾತನ್ನು ತಿಳಿದುಕೊಳ್ಳಬಾರದು ಎಂದು ಹೇಳಿದಿರಿ. ಅವರು ತಮ್ಮ ಕೆಲಸ ಮಾಡಿಲ್ಲ ಎನ್ನುವುದು ಸಿದ್ಧವಾಯಿತು, ಅಂಥ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಹೆಚ್. ರಂಗನಾಥ್.—ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಈಗ ರಿಪೋರ್ಟ್ಸ್ ಬರುತ್ತಾ ಇವೆ. ಯಾರು ಯಾರು ಕಾನೂನು ಪ್ರಕಾರ ಕೆಲಸ ಮಾಡುವುದಿಲ್ಲವೋ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಯೋಜನೆ ಮಾಡುತ್ತಾ ಇದ್ದೇವೆ. ಆದಕ್ಕೆ ನಿರ್ದಿಷ್ಟವಾದ ಪ್ರಶ್ನೆ ಕೇಳಿದರೇ ಉತ್ತರ ಕೊಡಲಾಗುತ್ತೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು ಹೇಳಿದಿರಿ ನ್ಯಾಷನಲ್ ಹೈವೇಗಳಲ್ಲಿ ದುಡ್ಡು ವಸೂಲಿ ಮಾಡುತ್ತಾ ಇಲ್ಲ ಎಂದು. ನೇರವಾಗಿ ನನ್ನ ಜೊತೆಗೆ ಈಗಲೇ ಬನ್ನಿ ನಂ. ೭ ನ್ಯಾಷನಲ್ ಹೈವೇನಲ್ಲಿ ದುಡ್ಡು ವಸೂಲು ಮಾಡುವುದನ್ನು ಸಾಬೀತು ಮಾಡಿದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ಹೆಚ್. ರಂಗನಾಥ್.—ನಾನು ಪೋಲೀಸಿನವನು ಆಗುವುದಕ್ಕೆ ಆಗುತ್ತದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದಿರಿ ಕಂಟ್ರಾಕ್ಟ್ ಕ್ಯಾರೇಜುಗಳಿಂದ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ನಿಗೆ ನಷ್ಟ ಆಗಿಲ್ಲ ಎಂದು. ಕೋಲಾರ ಜಿಲ್ಲೆಯಿಂದ ಮುಂಡೆ ಕಂಟ್ರಾಕ್ಟ್ ಬಸ್ ಮತ್ತು ಹಿಂದೆ ಕಂಟ್ರಾಕ್ಟ್ ಬಸ್ ಹೋಗುತ್ತಿದ್ದಂತೆ ಎರಡು ಕಂಟ್ರಾಕ್ ಬಸ್‌ಗಳ ಮಧ್ಯೆ ಕೆ.ಎಸ್.ಆರ್.ಟಿ.ಸಿ. ಬಸ್ ಹೋಗುತ್ತಿರುತ್ತೆ. ಅವರು ಬಸ್ ಡಿಪೋಗೆ ಬಾದು ಪ್ಯಾಸೆಂಜರನ್ನು ಕರೆದುಕೊಂಡು ಹೋಗುತ್ತಾರೆ. ಇದರಿಂದ ಕೆ.ಎಸ್.ಆರ್.ಟಿ.ಸಿ.ಗೆ ನಷ್ಟ ಆಗಿದೆ ಎಂದು ದೂರು ಬಂದಿಲ್ಲವೇ ?